ನಾಟಾಗಳು	13972.034 ಘ.ಮಿ.	6569.892 ಘ.ಮಿ.	1748.671 ಘ.ಮಿ.	22290.597 ಘ.ಮಿ.
ಸೌಧೆ	16149.767 ಘ.ಮಿ.	4743.853 ಘ.ಮಿ.	2683.940 ಘ.ಮಿ.	23577.560 ಘ.ಮಿ.

ಇ) ಇಲ್ಲಿಯವರೆಗೆ ಎಫ್.ಒ.ಸಿ. ಆದ ಪ್ರಕರಣಗಳ ಮರಗಳ ಒಟ್ಟು ಮೌಲ್ಯ ರೂ. 3,56,22,892.00 ವಿವರಗಳು ಈ ಕೆಳಗಿನಂತಿವೆ:-

	ಮಡಿಕೇರಿ ವಿಭಾಗ	ವಿರಾಜಪೇಟೆ ವಿಭಾಗ	ಅರಣ್ಯ ಸಂಚಾರಿ ದಳ, ಮಡಿಕೇರಿ
ಒಟ್ಟು ಮೌಲ್ಯ	ರೂ. 1,87,55,813	ರೂ. 1,19,81,290	ರೂ. 48,85,789
ಮರಗಳ ಜಾತಿಗಳು:	ಶ್ರೀಗಂಧ, ತೇಗ ಬೀಟಿ, ಕಾಡುಜಾತಿ	ಶ್ರೀಗಂಧ, ಬೀಟಿ ತೇಗ, ಹೆಬ್ಬಲಸು ಬೆಳ್ಳಗಿಲು ನೇರಳೆ, ಹಲಸು, ನಂದಿ ಹೊನ್ನೆ ಕುಳುರಮಾವು, ಮಾವು ಇತರ ಕಾಡುಜಾತಿ	ಬೀಟಿ, ತೇಗ, ಬಳಂಜಿ, ಹೊನ್ನೆ ನಂದಿ, ಕರಡಿ, ಇತರೆ ಕಾಡುಜಾತಿ

ಬೈಲಹೊಂಗಲ ತಾಲ್ಲೂಕಿನಲ್ಲಿ ಪಶುಚಿಕಿತ್ಸಾಲಯ ತೆರೆಯುವುದು.

2889:(3878)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಗೋವಿನಕೊಪ್ಪ ಹಾಗೂ ಸವದತ್ತಿ ತಾಲ್ಲೂಕಿನ, ಮಾಟೊಳ್ಳಿ ಗ್ರಾಮಗಳಲ್ಲಿ ಪಶುಚಿಕಿತ್ಸಾಲಯವನ್ನು ತೆರೆಯಬೇಕೆಂದು ಮನವಿಗಳು ಏನಾದರೂ ಸರಕಾರಕ್ಕೆ ಬಂದಿವೆಯೇ?

ಆ) ಹಾಗಿದ್ದಲ್ಲಿ ಅಲ್ಲಿ ಪಶು ಚಿಕಿತ್ಸಾಲಯ ತೆರೆಯಲು ಸರಕಾರ ಕ್ರಮಕೈಗೊಳ್ಳುವುದೇ?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೈಲಹೊಂಗಲ ಕ್ಷೇತ್ರದಲ್ಲಿ ಯುವಕ ಸಂಘಗಳ ಅಭಿವೃದ್ಧಿ.

2890:(3879)

ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಯುವಕ ಮಂಡಳಿಗಳು ನೋಂದಾಯಿಸಲ್ಪಟ್ಟಿರುತ್ತವೆ? (ಮತಕ್ಷೇತ್ರವಾರು ಮಾಹಿತಿ ನೀಡುವುದು)

ಆ) ಆ ಪೈಕಿ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ನೊಂದಾಯಿಸಲ್ಪಟ್ಟವುಗಳ ಸಂಖ್ಯೆ ಎಷ್ಟು? (ಯುವಕ ಮಂಡಳಿಗಳ ಹೆಸರು ಹಾಗೂ ವಿಳಾಸವನ್ನು ಒದಗಿಸುವುದು)

ಇ) ಈ ರೀತಿ ನೊಂದಾಯಿಸಲ್ಪಟ್ಟ ಯುವ ಮಂಡಳಗಳಿಗೆ 1997-98 ಹಾಗೂ 98-99ರಲ್ಲಿ ಯಾವ ಯಾವ ಸಹಾಯ ನೀಡಲಾಗಿದೆ.

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ನೋಂದಾಯಿಸಲ್ಪಟ್ಟ ಯುವಕ ಮಂಡಳಗಳಿಗೆ ಸರ್ಕಾರದವರು 1997-98 ಹಾಗೂ 1998-99ನೇ ಸಾಲಿನಲ್ಲಿ ಯಾವ ಯಾವ ಸಹಾಯಧನ ನೀಡಲಾಗಿದೆ; ಹಾಗೂ ಅವುಗಳಲ್ಲಿ ತಮ್ಮದೇ ಆದ ಕಟ್ಟಡಗಳನ್ನು ಹೊಂದಿರುವ ಯುವಕ ಮಂಡಳಿಗಳೆಷ್ಟು?

ಶ್ರೀ ನಾಗಪ್ಪ ಸಾಲೋನಿ (ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು):

ಅ) ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 2438 ಯುವಕ ಮಂಡಳಿಗಳು ಜಿಲ್ಲಾ ಯುವಜನ ಸೇವಾ ಮಂಡಳಿಗೆ ನೊಂದಾಯಿಸಲ್ಪಟ್ಟಿರುತ್ತದೆ. ಮತಕ್ಷೇತ್ರವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.